**ಇಂದು ದಿನಾಂಕ 05.03.2026 ರಂದು ಡಿಡಬ್ಲ್ಯೂ -2 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಾಟೀ ಸವಾಲುಃ ವಾದಿ ಪರ ವಕೀಲರಿಂದಃ**

**1.** ನನಗೆ ಹುಚ್ಚಪ್ಪನ ಪರಿಚಯವಿಲ್ಲ. ಸಾಲದ ವ್ಯವಹಾರ ಆಗುವಾಗ ನಾನು ಇರಲಿಲ್ಲ. ಪ್ರಮಾಣ ಪತ್ರದ ವಿಚಾರಗಳನ್ನು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದರೆ ನಮ್ಮ ದಾಖಲಾತಿಗಳು ನಿಮ್ಮ ಬ್ಯಾಂಕಿನಲ್ಲಿ ಇವೆ ಕೊಡಿ ಎಂದು ಕೇಳಿದರು ಅದರ ಆಧಾರ ಮೇಲೆ ಕೊಟ್ಟು ಸಾಕ್ಷಿ ಹೇಳುತ್ತಿದ್ದೇನೆ. ನನಗೆ ಸಮನ್ಸ್‌ನ ಜೆರಾಕ್ಸ್ ಕಾಪಿಯನ್ನು 5 ನೇ ಪ್ರತಿವಾದಿ ತಂದುಕೊಟ್ಟಿದ್ದ ಕಾರಣ ಬಂದಿದ್ದೇನೆ. ನಾನು ಸಮನ್ಸ್ ನಲ್ಲಿ ದಾಖಲೆಯನ್ನು ಹಾಜರು ಮಾಡಬೇಕು ಎಂದು ಇತ್ತು. ನನಗೆ ನ್ಯಾಯಾಲಯದ ಮುಂದೆ ಮೌಖಿಕ ಸಾಕ್ಷ್ಯ ಹೇಳಬೇಕು ಎಂದು ಯಾರೂ ಹೇಳಿಲ್ಲ. ಪ್ರಮಾಣ ಪತ್ರವನ್ನು ನಾನು ಹೇಳಿಕೆ ಕೊಟ್ಟ ನಂತರ 5 ನೇ ಪ್ರತಿವಾದಿಯ ವಕೀಲರು ಮಾಡಿದ್ದಾರೆ. 5 ನೇ ಪ್ರತಿವಾದಿಯ ಸಾಕ್ಷ್ಯವನ್ನು ನಾನು ಓದಿಲ್ಲ. ಪ್ರಮಾಣ ಪತ್ರದ ಪ್ಯಾರಾ ನಂ.5 ರಲ್ಲಿ ಹೇಳಿರುವ ಮಾಹಿತಿಯನ್ನು ಯಾವ ಆಧಾರದ ಮೇಲೆ ಹೇಳಿದ್ದೀರಿ ಎಂದರೆ ಹಿಂದೆ ಸಾಲ ಪಡೆಯುವಾಗ ಮೂಲ ದಾಖಲೆ ಇಲ್ಲ ಎಂದು ಪ್ರಮಾಣ ಪತ್ರ ಆ ಕಡತದಲ್ಲಿ ಇತ್ತು ಅದರ ಆಧಾರದ ಮೇಲೆ ಹೇಳಿದ್ದೇನೆ. ಸಾಲ ಪಡೆಯುವ ಮುನ್ನ ನಮ್ಮ ಬ್ಯಾಂಕಿನಲ್ಲಿ ಕಾನೂನು ಅಭಿಪ್ರಾಯವನ್ನು ಪಡೆಯುತ್ತಾರೆ. 5 ನೇ ಪ್ರತಿವಾದಿ ಪಡೆದ ಸಾಲದ ಬಗ್ಗೆ ನಮ್ಮ ಬ್ಯಾಂಕಿನಲ್ಲಿ ಕಾನೂನು ಅಭಿಪ್ರಾಯ ಇದೆ. ಕಾನೂನು ಅಭಿಪ್ರಾಯ ಕೊಟ್ಟ ಬಗ್ಗೆ ನಮ್ಮ ವಕೀಲರು ಮೂಲ ಕ್ರಯಪತ್ರವನ್ನು ನೋಡಿದ್ದಾರ ಇಲ್ಲವ ನನಗೆ ಗೊತ್ತಿಲ್ಲ. ಸಾಲ ಪಡೆಯುವಾಗ ಮೊದಲು ಅರ್ಜಿಯನ್ನು ಕೊಡುತ್ತಾರೆ. ಸಾಲದ ಅರ್ಜಿ ಕೊಡುವಾಗಲೇ ಎಲ್ಲಾ ದಾಖಲೆಗಳನ್ನು ನಾವು ಪರಿಶೀಲಿಸುತ್ತೇವೆ. ಸಾಲದ ಅರ್ಜಿಯಲ್ಲಿ ಯಾವ ದಾಖಲೆಗಳನ್ನು ಕೊಟ್ಟಿದ್ದಾರೆ ಎಂದು ಬರೆದಿರುತ್ತೇವೆ. ಮೂಲ ಪ್ರತಿ ಇಲ್ಲದಿದ್ದರೆ ಕಳೆದು ಹೋಗಿದೆ ಎಂದು ಬರೆಯಬೇಕು ಎಂದರೆ ನಿಜ. ಪ್ರಮಾಣ ಪತ್ರವನ್ನು ಅರ್ಜಿಯನ್ನು ಕೊಡುವ ಮೊದಲೇ ತೆಗೆದುಕೊಂಡಿದ್ದೆನು. ಪ್ರಮಾಣ ಪತ್ರದ ಬಗ್ಗೆ ಸಾಲದ ಅರ್ಜಿಯಲ್ಲಿ ಉಲ್ಲೇಖಿಸಿಲ್ಲ. ನಾನು ಮತ್ತು 5 ನೇ ಪ್ರತಿವಾದಿ ಸೇರಿ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಬ್ಯಾಂಕಿನ ರೆಕಾರ್ಡ್ ನಲ್ಲಿ ಕ್ರಯಪತ್ರದ ದೃಢೀಕೃತ ನಕಲು ಇಲ್ಲ. ಸಾಲ ತೀರಿದ ನಂತರ ಕೊಟ್ಟ ದಾಖಲೆಗಳನ್ನು ವಾಪಸ್ಸು ಕೊಡಬೇಕು ಎಂದರೆ ನಿಜ. ಅವರು ಕೇಳಿಲ್ಲ. ನಾನು ಸುಳ್ಳು ಸಾಕ್ಷಿಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**